Hosa Diganta July 8, 2013

## Continuous skating for 8 hours | One day wage for PMs Relief Fund

# Unique Condolence

**Karwar:** The Roller Skating Club of Kaiga conducted 8 hours of continuous skating as a mark of respect and to pray for peace in the memory of all those who lost their lives tragically during the recent flash floods of Uttarakhand.

Speaking on the occasion, Shri H.N. Bhat, Site Director of Kaiga spoke of the role of the armed forces in the rescue operations and of the duty of all citizens to appreciate their commendable efforts in saving innumerable lives in spite of extreme adversities . He appreciated the employees of NPCIL who have donated a day's salary towards The PMs Relief Fund. He spoke of the power of collective prayer for the departed souls and of solace to the grieving families. Station Directors R.R. Dani & Hemantkumar, Chief Superintendents M Srinivas & Sanjivkumar and President of Kaiga Roller Skating Academy Sunil Gadgil spoke on the occasion.

Two minutes silence was observed before start of the program. Children paid homage by lighting candles and skating for eight hours in different style and stunts. Sunil Barkur compered the program. Dilip Hanbar trained children for seven days to get ready for this program. Gopal Bhandari, Umashankar, Shivalingaiah, Harish helped in conducting the program

## ಸತತ ಎಂಟು ಗಂಟೆಗಳ ಸ್ಕೇಟಿಂಗ್ | ಒಂದು ದಿನದ ವೇತನ ನಿಧಿಗೆ

# ವಿನೂತನ ರೀತಿಯಲ್ಲಿ ಅಶ್ರುತರ್ಪಣ

ಕಾರವಾರ: ಇತ್ತೀಚೆಗೆ ಉತ್ತರಾಖಂಡದಲ್ಲಿ ಸಂಭವಿಸಿದ ಭೀಕರ ಜಲಪ್ರಳಯದಲ್ಲಿ ಪ್ರಾಣತೆತ್ತ ಎಲ್ಲ ಭಾರತೀಯರ ಆತ್ಮಕ್ಕೆ ಕೈಗಾದ ರೋಲರ್ ಸ್ಕೇಟಿಂಗ ಅಕಾಡೆಮಿಯಿಂದ ಸತತ ಎಂಟು ಗಂಟೆಗಳ ಸ್ಕೇಟಿಂಗ್ ಮಾಡುವುದರ ಮೂಲಕ ವಿನೂತನವಾಗಿ ಶಾಂತಿಕೋರಿದರು.



ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕೈಗಾದ ಸ್ಥಳ ನಿರ್ದೇಶಕ ಎಚ್.ಎನ್.ಭಟ್ಟ ಮಾತನಾಡಿ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಹಲವಾರು ಜನರ ಪ್ರಾಣರಕ್ಷಿಸಿದ ಭಾರತೀಯ ಸೇನೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಾದುದ್ದು ನಮ್ಮ ಕರ್ತವ್ಯವಾಗಿದೆ. ಈ ದುರಂತದಲ್ಲಿ ನೆರವಾಗಲು ಎನ್.ಪಿ.ಸಿ.ಐ.ಎಲ್. ನ ಎಲ್ಲಾ ನೌಕರರು ತಮ್ಮ ಒಂದು ದಿನದ ವೇತನವನ್ನು ಪ್ರಧಾನಮಂತ್ರಿಗಳ ವಿಪತ್ತು ನಿರ್ವಾಹಣಾ ನಿಧಿಗೆ ನೀಡಿರುವುದು ಅಭಿನಂದನೀಯ ಎಂದರು.

ಈ ದುರ್ಘಟನೆಯಲ್ಲಿ ಮೃತಪಟ್ಟ ಎಲ್ಲರ ಆತ್ಮಕ್ಕೆ ಶಾಂತಿಕೋರೋಣ ಮತ್ತು ಅವರ ಕುಟುಂಬಗಳಿಗೆ ಈ ಕಷ್ಟದಿಂದ ಹೊರಬರಲು ಪ್ರಾರ್ಥಿಸೋಣ ಎಂದರು. ಕೈಗಾ 1 ಮತ್ತು 2 ಘಟಕಗಳ ಸ್ಥಾನಿಕ ನಿರ್ದೇಶಕ ಆರ್. ಆರ್.ದಾನಿ, ಚೀಫ್ ಸುಪರಿಟೆಂಡೆಂಟ್ ಎಂ.ಶ್ರೀನಿವಾಸ, ಅಧಿಕಾರಿ ಹೇಮಂತಕುಮಾರ, ಸಂಜೀವಕುಮಾರ್, ಕೈಗಾ ರೋಲರ್ ಸ್ಕೇಟಿಂಗ್ ಅಕಾಡಮಿ ಅಧ್ಯಕ್ಷ ಸುನೀಲ ಗಾಡ್ಗೀಳ ಮಾತನಾಡಿದರು.



ಕಾರ್ಯಕ್ರದ ಆರಂಭದಲ್ಲಿ ಎರಡು ನಿಮಿಷಗಳ ಮೌನಾಚರಣೆಯನ್ನು ಮಾಡಲಾಯಿತು. ಎಲ್ಲರೂ ಮೊಂಬತ್ತಿಯನ್ನು ಬೆಳಗಿ ಸ್ಕೇಟಿಂಗ್ ಮಕ್ಕಳು ಸತತ ಎಂಟು ಗಂಟೆಗಳ ಕಾಲ ವಿವಿಧರೀತಿಯ ಸಾಹಸಗಳನ್ನು ಪ್ರದರ್ಶಿಸುತ್ತಾ ಸ್ಕೇಟಿಂಗ್ ಮಾಡಿ ಅಶ್ರುತರ್ಪಣವನ್ನು ಸಲ್ಲಿಸಿದರು.

> ಇತ್ತೀಚೆಗೆ ಉತ್ತರಾಖಂಡದಲ್ಲಿ ಸಂಭವಿಸಿದ ಭೀಕರ ಜಲಪ್ರಳಯದಲ್ಲಿ ಪ್ರಾಣತೆತ್ತ ಎಲ್ಲ ಭಾರತೀಯರ ಆತ್ಮಕ್ಕೆ ಕೈಗಾದ ರೋಲರ್ ಸ್ಕೇಟಿಂಗ ಅಕಾಡೆಮಿಯಿಂದ ಸತತ ಎಂಟು ಗಂಟೆಗಳ ಸ್ಕೇಟಿಂಗ್ ಮಾಡುವುದರ ಮೂಲಕ ವಿನೂತನವಾಗಿ ಶಾಂತಿಕೋರಿದರು.

ಸುನೀಲ ಬಾರ್ಕೂರ ನಿರೂಪಿಸಿದರು. ದಿಲೀಪ ಹಣಬರ ಸತತ ಏಳುದಿನಗಳ ಕಾಲ ಮಕ್ಕಳಿಗೆ ತರಬೇತಿಯನ್ನು ನೀಡಿ ಮಕ್ಕಳನ್ನು ಸಜ್ಜುಗೊಳಿಸಿದರು. ಗೋಪಾಲ ಭಂಡಾರೆ, ಉಮಾಶಂಕರ, ಶಿವಲಿಂಗಯ್ಯ,ಹರೀಶ ಕಾರ್ಯಕ್ರಮವನ್ನು ಸಂಘಟಿಸಲು ನೆರವಾದರು.

Kannada Prabha July 8, 2013



# ಸ್ಕೇಟಿಂಗ್ ಮೂಲಕ ಮೃತರಿಗೆ ಅಶ್ರುತರ್ಪಣ

ಕಾರವಾರ: ಕೈಗಾ ರೋಲರ್ ಸ್ಕೇಟಿಂಗ್ ಅಕಾಡೆಮಿಯವರು ಉತ್ತರಾಖಂಡ್‌ದಲ್ಲಿ ಮೃತಪಟ್ಟವರಿಗೆ ವಿನೂತನ ರೀತಿಯಲ್ಲಿ ಅಶ್ರುತರ್ಪಣ ಸಲ್ಲಿಸಿದರು. ಸತತ ಎಂಟು ಗಂಟೆಗಳ ಕಾಲ ಸ್ಕೇಟಿಂಗ್ ಮಾಡುವುದರ ಮೂಲಕ ಶಾಂತಿಕೋರಿದರು. 150ಕ್ಕೂ ಹೆಚ್ಚಿನ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಉದ್ಘಾಟಿಸಿದ ಕೈಗಾ ಸ್ಥಳ ನಿರ್ದೇಶಕ ಎಚ್.ಎನ್. ಭಟ್ ಮಾತನಾಡಿ, ಸಂಕಷ್ಟದ ಪರಿಸ್ಥಿತಿಯಲ್ಲಿ ಜನರ ಪ್ರಾಣ ರಕ್ಷಿಸಿದ ಭಾರತೀಯ ಸೇನೆಯನ್ನು ನಾವಿಲ್ಲಿ ನೆನೆಸುವುದು ನಮ್ಮ ಕರ್ತವ್ಯ. ಪರಿಸ್ಥಿತಿ ನಿಭಾಯಿಸಲು ಅಣು ವಿದ್ಯುತ್ ನಿಗಮದ ನೌಕರರು ಒಂದು ದಿನದ ವೇತನವನ್ನು ಪ್ರಧಾನಮಂತ್ರಿಗಳ ವಿಪತ್ತು ನಿರ್ವಹಣಾ ನಿಧಿಗೆ ದಾನಮಾಡಿರುವುದು ಅಭಿನಂದನೀಯ ಎಂದರು. ದುರ್ಘಟನೆಯಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿಕೋರೋಣ ಮತ್ತು ಅವರ ಕುಟುಂಬಗಳು ಕಷ್ಟದಿಂದ ಹೊರಬರುವಂತೆ ಪ್ರಾರ್ಥಿಸೋಣ ಎಂದರು. ಕೈಗಾ ರೋಲರ್ ಸ್ಕೇಟಿಂಗ್ ಅಕಾಡೆಮಿ ಅಧ್ಯಕ್ಷ ಸುನೀಲ ಗಾಡ್ಗೀಳ ಮಾತನಾಡಿ, ಮಕ್ಕಳು ಸ್ವಯಂ ಈ ಕಾರ್ಯಕ್ಕೆ ಮುಂದೆ ಬಂದಿರುವುದು ಮೆಚ್ಚುವಂತದ್ದು ಎಂದು ಹೇಳಿದರು. ಆರಂಭದಲ್ಲಿ ಎರಡು ನಿಮಿಷಗಳ ಮೌನಾಚರಣೆ ಮಾಡಲಾಯಿತು. ಎಲ್ಲ ಮಕ್ಕಳು ಮೇಣದ ಬತ್ತಿ ಬೆಳಗಿ ಎಂಟು ಗಂಟೆಗಳ ಕಾಲ ಸ್ಕೇಟಿಂಗ್‌ನ ವಿವಿಧ ರೀತಿಯ ಸಾಹಸಗಳನ್ನು ಪ್ರದರ್ಶಿಸಿದರು. ದಿಲೀಪ ಹಣಬರ ಮಕ್ಕಳಿಗೆ ತರಬೇತಿಯನ್ನು ನೀಡಿದ್ದರು. ಸುನೀಲ ಬಾರ್ಕೂರ ನಿರೂಪಿಸದರು. ಗೋಪಾಲ ಭಂಡಾರಿ, ಉಮಾಶಂಕರ, ಶಿವಲಿಂಗಯ್ಯ, ಹರೀಶ ಕಾರ್ಯಕ್ರಮ ಸಂಘಟಿಸಲು ನೆರವಾದರು.

Karavali Munjavu

# ಉತ್ತರಾಖಂಡ ಜಲಪ್ರಳಯ: ಮೃತರ ಆತ್ಮಶಾಂತಿಗಾಗಿ 8 ತಾಸು ಸ್ಕೇಟಿಂಗ್



ಕಾರವಾರ: ಕೈಗಾದ ರೋಲರ್ ಸ್ಕೇಟಿಂಗ್ ಅಕಾಡೆಮಿ ವತಿಯಿಂದ ಇತ್ತೀಚೆಗೆ ಉತ್ತರಾಖಂಡದ ಜಲಪ್ರಳಯದಲ್ಲಿ ಪ್ರಾಣತೆತ್ತ ಜನರ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಪುಟ್ಟ ಮಕ್ಕಳು ಸತತ ಎಂಟು ಗಂಟೆಗಳ ಸ್ಕೇಟಿಂಗ್ ಮಾಡುವುದರ ಮೂಲಕ ವಿನೂತನವಾಗಿ ಶಾಂತಿ ಕೋರಿದರು.

ಕಾರ್ಯಕ್ರಮ ಉದ್ಘಾಟಿಸಿದ ಕೈಗಾದ ಸ್ಥಳ ನಿರ್ದೇಶಕ ಎಚ್.ಎಚ್. ಭಟ್ಟ ಮಾತನಾಡಿ ಈ ಜಲಪ್ರಳಯದಲ್ಲಿ ಹಲವಾರು ಜನರ ಪ್ರಾಣ ರಕ್ಷಿಸಿದ ಭಾರತೀಯ ಯೋಧರ ಸೇವೆಯನ್ನು ನಾವಿಲ್ಲಿ ನೆನಪಿಸಿಕೊಂಡು ಅವರಿಗೆ ಧನ್ಯವಾದ ಅರ್ಪಿಸಬೇಕಾಗಿದೆ. ಈ ದುರಂತದಲ್ಲಿ ಮೃತಪಟ್ಟ ಸಂಬಂಧಿಕರಿಗೆ ಹಾಗು ಸಂತ್ರಸ್ತರಾದವರ ನೆರವಿಗಾಗಿ ಎನ್.ಪಿ.ಸಿ.ಐ.ಎಲ್.ನ ಎಲ್ಲಾ ನೌಕರರು ತಮ್ಮ ಒಂದು ದಿನದ ವೇತನವನ್ನು ಪ್ರಧಾನ ಮಂತ್ರಿಗಳ ವಿಪತ್ತು ನಿರ್ವಹಣಾ ನಿಧಿಗೆ ದಾನ ಮಾಡಿರುವುದು ಅಭಿನಂದನೀಯ ಎಂದರು.

ಕೈಗಾ ರೋಲರ್ ಸ್ಕೇಟಿಂಗ್ ಅಕಾಡೆಮಿ ಅಧ್ಯಕ್ಷರಾದ ಸುನೀಲ ಗಾಡ್ಗೀಳ ಮಾತನಾಡಿ ಮಕ್ಕಳು ಸ್ವಯಂಸ್ಫೂರ್ತಿಯಿಂದ ಈ ಕಾರ್ಯಕ್ಕೆ ಮುಂದೆ ಬಂದಿರುವುದು ನಿಜಕ್ಕೂ ಮೆಚ್ಚುವಂತಹದ್ದು, ಅವರಲ್ಲಿ ಇಂತಹ ಮನೋಭಾವನೆ ಬೆಳೆಸುವುದು ಪಾಲಕರ ಕರ್ತವ್ಯವಾಗಿದೆ. ಮಕ್ಕಳು ಇದರಂತೆ ಮುಂದೆ ಬರಲಿ ಎಂದು ಹೇಳಿದರು.

ಕೈಗಾ 1 ಮತ್ತು 2 ಘಟಕಗಳ ಸ್ಥಾನಿಕ ನಿರ್ದೇಶಕರಾದ ಹೇಮಂತ ಕುಮಾರ, ಚೀಫ್ ಸುಪರಿಂಟೆಂಡೆಂಟ್ ಸಂಜೀವ ಕುಮಾರ ಮಾತನಾಡಿ ದುರಂತದಲ್ಲಿ ಮೃತಪಟ್ಟ ಎಲ್ಲರ ಆತ್ಮಕ್ಕೆ ಶಾಂತಿಕೋರಿ, ಅವರ ಕುಟುಂಬಗಳಿಗೆ ಈ ಕಷ್ಟದಿಂದ ಹೊರಬರಲು ಪ್ರಾರ್ಥಿಸೋಣ ಎಂದರು.

ಕಾರ್ಯಕ್ರಮ ಆರಂಭದಲ್ಲಿ ಎರಡು ನಿಮಿಷಗಳ ಮೌನಾಚರಣೆಯನ್ನು ಮಾಡಲಾಯಿತು. ಎಲ್ಲ ಮಕ್ಕಳು ಮೇಣದ ಬತ್ತಿ ಬೆಳಗಿ ಸತತ ಎಂಟು ಘಂಟೆಗಳ ಕಾಲ ವಿವಿಧ ರೀತಿಯ ಸಾಹಸಗಳನ್ನು ಪ್ರದರ್ಶಿಸುತ್ತಾ ಸ್ಕೇಟಿಂಗ್ ಮಾಡಿದರು. ಪುಟ್ಟ ಬಾಲಕ ಶುಭಂ ಹಣಬರ ವಿವಿಧ ಭಂಗಿಯಲ್ಲಿ ಸ್ಕೇಟಿಂಗ್ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ.

ಕಾರ್ಯಕ್ರಮವನ್ನು ಸುನೀಲ ಬಾರ್ಕೂರ ನಿರ್ವಹಿಸಿದರೂ ದಿಲೀಪ ಹಣಬರ ಮಕ್ಕಳಿಗೆ ಸ್ಕೇಟಿಂಗ್ ತರಬೇತಿ ನೀಡಿದ್ದಾರೆ. ಗೋಪಾಲ ಭಂಡಾರೆ, ಉಮಾ ಶಂಕರ, ಶಿವಲಿಂಗಯ್ಯ, ಹರೀಶ ಕಾರ್ಯಕ್ರಮಕ್ಕೆ ಸಹಕರಿಸಿದರು.

July 8, 2013

Prajavani

July 8, 2013

## ಶ್ರದ್ಧಾಂಜಲಿ

ಕಾರವಾರ ತಾಲ್ಲೂಕಿನ ಕೈಗಾದ ಟೌನ್‌ಶಿಪ್‌ನಲ್ಲಿ ಭಾನುವಾರ ರೋಲರ್ ಸ್ಕೇಟಿಂಗ್ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸ್ಕೇಟಿಂಗ್ ಪಟುಗಳು ಮೊಂಬತ್ತಿ ಹೊತ್ತಿಸುವ ಮೂಲಕ ಉತ್ತರಾಖಂಡದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.



## Samyukta Karnataka

July 8, 2013

**ಸ್ಕೇಟಿಂಗ್ ಪ್ರದರ್ಶನ...**



**ಶ್ರದ್ಧಾಂಜಲಿ**

ಕಾರವಾರ: ಕೈಗಾ ರೋಲರ್ ಸ್ಕೇಟಿಂಗ್ ಅಕಾಡೆಮಿ ಸತತ 8 ಗಂಟೆಗಳ ಕಾಲ ಸ್ಕೇಟಿಂಗ್ ಪ್ರದರ್ಶಿಸಿ ಉತ್ತರಾಖಂಡದಲ್ಲಿ ಮೃತಪಟ್ಟವರಿಗಾಗಿ ಅಶ್ರುತರ್ಪಣ ಸಲ್ಲಿಸಿತು.

## Vijayavani

July 8, 2013



ಉತ್ತರಾಖಂಡದ ಪ್ರವಾಹದಲ್ಲಿ ಮಡಿದವರಿಗಾಗಿ ಕೈಗಾದ ಸುಮಾರು 150 ಕ್ಕೂ ಅಧಿಕ ಮಕ್ಕಳು ಸತತ 8 ಗಂಟೆ ಸ್ಕೇಟಿಂಗ್ ನಡೆಸಿ ಶ್ರದ್ಧಾಂಜಲಿ ಸಲ್ಲಿಸಿದರು.

# ಚಿಣ್ಣರಿಂದ ಸತತ 8 ಗಂಟೆ ಸ್ಕೇಟಿಂಗ್

### ■ ಉತ್ತರಾಖಂಡದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ

ಕದ್ರಾ: ಇಲ್ಲಿನ ಮಲ್ಲಾಪುರದ ಕೈಗಾ ರಿಕ್ರಿಯೇಷನ್ ಕ್ಲಬ್‌ನಲ್ಲಿ ಕೈಗಾ ರೋಲರ್ ಸ್ಕೇಟಿಂಗ್ ಅಕಾಡಮಿಯ ವತಿಯಿಂದ ಸತತ 8 ಗಂಟೆ ಸ್ಕೇಟಿಂಗ್ ಮಾಡುವ ಮೂಲಕ ಉತ್ತರಾಖಂಡ ಪ್ರವಾಹದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ಕೇಟಿಂಗ್ ಗಾಲಿ ತೊಟ್ಟ ಸುಮಾರು 150 ಬಾಲಕರು ಮತ್ತು ಬಾಲಕಿಯರು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಉತ್ತರಾಖಂಡದ ನಕ್ಷೆ ಬಿಡಿಸಿ ಅದರಲ್ಲಿ ಮೇಣದ ಬತ್ತಿ ಹಚ್ಚಿ ಎರಡು ನಿಮಿಷ ಮೌನಾಚರಣೆ ಮಾಡುವ ಮೂಲಕ ಸ್ಕೇಟಿಂಗ್ ಪ್ರಾರಂಭಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕೈಗಾದ ಸ್ಥಳ ನಿರ್ದೇಶಕ ಎಚ್. ಎನ್. ಭಟ್ ಮಾತನಾಡಿ, 'ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಹಲವಾರು ಜನರ ಪ್ರಾಣ ರಕ್ಷಿಸಿದ ಭಾರತೀಯ ಸೇನೆಯನ್ನು ನಾವಿಲ್ಲಿ ನೆನಪಿಸಿಕೊಳ್ಳ ಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ದುರಂತದಲ್ಲಿ ನೆರವಾಗಲು ಎನ್‌ಪಿಸಿಐಎಲ್‌ನ ಎಲ್ಲಾ ನೌಕರರು ತಮ್ಮ ಒಂದು ದಿನದ ವೇತನವನ್ನು ಪ್ರಧಾನಮಂತ್ರಿಗಳ ವಿಪತ್ತು ನಿರ್ವಹಣಾ ನಿಧಿಗೆ ದಾನ ಮಾಡಿದ್ದಾರೆ' ಎಂದು ತಿಳಿಸಿದರು.



ಕೈಗಾದ ರೋಲರ್ ಸ್ಕೇಟಿಂಗ್ ಅಕಾಡಮಿಯ ಮಕ್ಕಳು ಮೇಣದಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಕೋರಿದರು.

ಕೈಗಾದ 1 ಮತ್ತು 2 ನೇ ಘಟಕಗಳ ಸ್ಥಾನಿಕ ನಿರ್ದೇಶಕ ಆರ್. ಆರ್. ದಾನಿ , ಮುಖ್ಯ ಕಾರ್ಯ ನಿರ್ವಾಹಕ ಎಂ. ಶ್ರೀನಿವಾಸ , ಕೈಗಾ 3 ಮತ್ತು 4 ಘಟಕಗಳ ಸ್ಥಾನಿಕ ನಿರ್ದೇಶಕ ಹೇಮಂತಕುಮಾರ, ಮುಖ್ಯ ಕಾರ್ಯ ನಿರ್ವಾಹಕ ಸಂಜೀವಕುಮಾರ ಉಪಸ್ಥಿತರಿದ್ದು ಮಾತನಾಡಿದರು.

ಕೈಗಾ ರೋಲರ್ ಸ್ಕೇಟಿಂಗ್ ಅಕಾಡಮಿಯ ಅಧ್ಯಕ್ಷ ಸುನೀಲ ಗಾಡ್ಗೀಳ ಉಪಸ್ಥಿತರಿದ್ದರು. ಸುನೀಲ ಬಾರ್ಕೂರ್ ಕಾರ್ಯಕ್ರಮ ನಿರೂಪಿಸಿದರು.

ದಿಲೀಪ ಹಣಬರ ಸತತ ಏಳು ದಿನ ಮಕ್ಕಳಿಗೆ ತರಬೇತಿ ನೀಡಿ ಮಕ್ಕಳನ್ನು ಸಜ್ಜುಗೊಳಿಸಿದರು. ಗೋಪಾಲ ಭಂಡಾರೆ, ಉಮಾಶಂಕರ, ಶಿವಲಿಂಗಯ್ಯ, ಹರೀಶ ಕಾರ್ಯಕ್ರಮ ಸಂಘಟಿಸಲು ನೆರವಾದರು.